**ದಿನಾಂಕಃ 22-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಒ ಜೆ ವಕೀಲರಿಂದಃ-**

1) ನನ್ನ ತಂದೆಯ ಹೆಸರು ಭದ್ರಪ್ಪ. ಭದ್ರಪ್ಪನಿಗೆ ನನ್ನ ತಂದೆಯನ್ನು ಸೇರಿ 6 ಜನ ಗಂಡು ಮಕ್ಕಳು ಮತ್ತು ಎರಡು ಜನ ಹೆಣ್ಣು ಮಕ್ಕಳು ಇರುತ್ತಾರೆ ಅವರೆಂದರೆ ನನ್ನ ತಂದೆ ಭದ್ರಪ್ಪ , ಕಲ್ಲಮ್ಮ, ಬಸವಣ್ಯಪ್ಪ , ತಿರುಕಪ್ಪ , ಶೇಖಪ್ಪ , ಕೋಡೆಪ್ಪ , ವೀರಪ್ಪ , ಶಾಂತಮ್ಮ. ಈ ದಾವೆಯಲ್ಲಿ ನನ್ನ ತಂದೆಯ ಅಣ್ಣ ತಮ್ಮಂದಿರು ಮತ್ತು ಅಕ್ಕಂದಿರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ತಂದೆಯ ಅಣ್ಣ ತಮ್ಮಂದಿರ ಮಧ್ಯೆ ಯಾವುದೇ ಹಿಸ್ಸೆ ಆಗಿರುವುದಿಲ್ಲ. ನಮ್ಮ ತಂದೆಯ ತಂದೆ ಹೆಸರು ಗೂಳೆಪ್ಪ. ಗೂಳಪ್ಪನಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಇತ್ತು. ಸದರಿ ಪಿತ್ರಾರ್ಜಿತ ಆಸ್ತಿಗಳು ಯಾವುವು ಅಂದರೆ ನನಗೆ ಸರ್ವೆ ನಂಬರ್ ಹೇಳಲು ಬರುವುದಿಲ್ಲ ಆದರೆ ಸದರಿ ಆಸ್ತಿಗಳ ಹೆಸರಿನಿಂದ ಕರೆಯುವ ಹೆಸರನ್ನು ಹೇಳುತ್ತೇನೆ ಅಂದರೆ ಕಣಸೋಗಿ ಗ್ರಾಮದಲ್ಲಿರುವ ದೊಡ್ಡಗದ್ದೆಯ ಜಮೀನಿನ ವಿಸ್ತೀರ್ಣ ಎರಡು ಮುಕ್ಕಾಲು ಎಕರೆ ಇರುತ್ತದೆ. ಊರ ಮುಂದೆ ಇರುವ ರಾಯರ ಗದ್ದೆ ಅದು 2 ಎಕರೆ ವಿಸ್ತೀರ್ಣ ಇರುತ್ತದೆ. ಕಣಸೋಗಿ ಗ್ರಾಮದಲ್ಲಿ ಇನ್ನೊಂದು ಜಮೀನು ಎರಡು ಮುಕ್ಕಾಲು ಖುಷ್ಕಿ ಜಮೀನು ಇರುತ್ತದೆ. ಕಣಸೋಗಿಯಲ್ಲಿ ನರಸಾಪುರ ಹತ್ತಿರ ಇರುವ ಜಮೀನು ವಿಸ್ತೀರ್ಣ 2 ಎಕರೆ ಇರುತ್ತದೆ. ಕಣಸೋಗಿಯಲ್ಲಿ ಪಿತ್ರಾರ್ಜಿತವಾಗಿ ಬಂದಿರುವ ಎರಡು ಮನೆಯ ಜಾಗಗಳು ಇರುತ್ತವೆ. ಈ ಎಲ್ಲಾ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಹಾಗೂ ನನಗೆ ಸದರಿ ಜಮೀನುಗಳನ್ನು ಸೇರಿಸಬೇಕು ಎಂದು ಗೊತ್ತಿಲ್ಲ. ನನ್ನ ವಕೀಲರಿಗೆ ದಾವಾ ಹಾಕುವ ಸಮಯದಲ್ಲಿ ಪಿತ್ರಾರ್ಜಿತ ಆಸ್ತಿಗಳ ಬಗ್ಗೆ ಮತ್ತು ನನ್ನ ತಂದೆ ಖರೀದಿ ಮಾಡಿದ ಆಸ್ತಿಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತೇನೆ.

2) ಸರ್ವೆ ನಂ 131 ವಿಸ್ತೀರ್ಣ 1 ಎಕರೆ ಜಮೀನನ್ನು ಮಲ್ಲಪ್ಪ ಮತ್ತು ಮಂಜಪ್ಪ ಅವರ ಕಡೆಯಿಂದ ನನ್ನ ತಂದೆಯವರು ಸುಮಾರು 15 ರಿಂದ 20 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ. ಇನ್ನೊಂದು ಜಮೀನು ಸರ್ವೆ ನಂ 132 ಅದರ ವಿಸ್ತೀರ್ಣ 2 ಎಕರೆ ನನ್ನ ತಂದೆ ನಾರಾಯಣರಾಯ್ ಅವರ ಕಡೆಯಿಂದ ಖರೀದಿ ಮಾಡಿರುತ್ತಾರೆ. ಸರ್ವೆ ನಂ 131 ಮತ್ತು 132 ಜಮೀನುಗಳು ತೊರ್ಗಸಿ ಗ್ರಾಮದಲ್ಲಿರುತ್ತವೆ. ದೇವಿಕೊಪ್ಪ ಗ್ರಾಮದಲ್ಲಿರುವ ಜಮೀನು ಸರ್ವೆ ನಂ 69/7 ವಿಸ್ತೀರ್ಣ 1 ಎಕರೆ 36 ಗುಂಟೆಯನ್ನು ನನ್ನ ತಂದೆಯವರು ಮಳ್ಳೂರು ಮದ್ದುರುರಾಯರಿಂದ ನನ್ನ ತಮ್ಮಂದಿರ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಗಳನ್ನು 2001 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಸದರಿ ಖರೀದಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

3) ಡಿಸೆಂಬರ್ 2002 ನೇ ಇಸವಿಯಲ್ಲಿ ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆಯವರು ಅವರು ಸಾಯುವ 15 ವರ್ಷಗಳ ಹಿಂದೆ ಪಾರ್ಶ್ವ ವಾಯು ಆಗಿತ್ತು ಅಂದರೆ ಸರಿಯಲ್ಲ. ಸಾಯುವ ಮುಂಚೆ ನನ್ನ ತಂದೆಯವರು ಸುಮಾರು 7 ರಿಂದ 8 ವರ್ಷಗಳಿಂದ ಹಾಸಿಗೆ ಹಿಡಿದಿದ್ದರು ಅಂದರೆ ಸರಿಯಲ್ಲ. ನನ್ನ ತಂದೆಯವರು ಜಮೀನಿನ ವ್ಯವಸಾಯವನ್ನು ಹೊರತುಪಡಿಸಿ ಬೇರೆ ಯಾವ ಉದ್ಯೋಗ ಮಾಡುತ್ತಿರಲಿಲ್ಲ ಮತ್ತು ಬೇರೆ ಯಾವ ಆದಾಯ ಇರಲಿಲ್ಲ.

4) ನನ್ನ ತಂದೆಗೆ 4 ಜನ ಮಕ್ಕಳು ಅವರೆಂದರೆ ನಾನು, ನನ್ನ ಅಕ್ಕ ರೇಣುಕಮ್ಮ , ನನ್ನ ತಮ್ಮಂದಿರಾದ ನಾಗರಾಜಪ್ಪ ಮತ್ತು ಬಸವರಾಜಪ್ಪ . ಸರ್ವೆ ನಂ 131 ಐಟಂ ನಂ 3 ರ ಆಸ್ತಿಯು ಕೇವಲ ನನ್ನ ಹೆಸರಿನಲ್ಲಿ

ಮಾತ್ರ ಖಾತೆ ಆಗಿರುತ್ತದೆ ಅಂದರೆ ಸಾಕ್ಷಿಯು ಸಾಲವನ್ನು ತೆಗೆದುಕೊಳ್ಳಲು ಪ್ರತ್ಯೇಕವಾಗಿ ಖಾತೆ ಮಾಡಿಕೊಂಡಿದ್ದೇನೆ ಎಂದು ಹೇಳುತ್ತಾರೆ. ಸರ್ವೆ ನಂ 131 ಕ್ಕೆ ನನ್ನ ಅಕ್ಕ ಮತ್ತು ತಮ್ಮಂದಿರಿಗೂ ಸಹ ಹಕ್ಕು ಇರುತ್ತದೆ ಅಂದರೆ ಸರಿ. ಸದರಿ ಆಸ್ತಿಯ ಖಾತೆ ಬದಲಾವಣೆ ಮಾಡಿಕೊಳ್ಳುವಾಗ ನನ್ನ ತಂದೆಗೆ ಬೇರೆ ವಾರಸುದಾರರು ಇದ್ದ ಬಗ್ಗೆ ತೋರಿಸಿಲಿಲ್ಲ ಅಂದರೆ ಸಾಕ್ಷಿಯು ತೋರಿಸಿಲ್ಲ ಅವರಿಗೆ ಹೇಳಿ ಮಾಡಿಕೊಂಡಿದ್ದೇವೆ. ನನ್ನ ಅಕ್ಕ ಮತ್ತು ತಮ್ಮಂದಿರಿಗೆ ಹೇಳಿ ಮಾಡಿಸಿಕೊಂಡ ಬಗ್ಗೆ ದಾಖಲೆ ಇದೆಯಾ ಅಂದರೆ ಸಾಕ್ಷಿಯು ಉತ್ತರ ಕೊಡದೇ ಸುಮ್ಮನೇ ನಿಂತಿರುತ್ತಾರೆ.ಸರ್ವೆ ನಂ 131 ಕ್ಕೆ ಎಂ ಆರ್ ನಂ 23/2005-06 ರಂತೆ ಬೇರೆ ವಾರಸುದಾರರು ಇದ್ದ ಬಗ್ಗೆ ತಿಳಿಸಿರುವುದಿಲ್ಲ ಹಾಗೂ ನಾನು ಮಗ ಅಂತಾ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಸರ್ವೆ ನಂ 131ರ ಖಾತೆಯು 2005-06ರಲ್ಲಿ ಬದಲಾವಣೆ ಮಾಡಿಕೊಂಡಿದ್ದೇನೆ ಅಂದರೆ ಸರಿ.

5) ನನ್ನ ತಂದೆ ತೀರಿಕೊಂಡ ನಂತರ ಐಟಂ ನಂ 1 ಸರ್ವೆ ನಂ 132 ನನ್ನ ತಾಯಿ ಹೆಸರಿಗೆ ಬದಲಾವಣೆ ಆಗಿದೆ ಅಂದರೆ ಸರಿ. ಆಸ್ತಿಯು ಖರೀದಿ ಮಾಡಿದವರ ಹೆಸರಿಗೆ ಖಾತೆ ಬದಲಾವಣೆ ಆಗಬೇಕು ಅಂದರೆ ಸಾಕ್ಷಿಯು ನನ್ನ ತಂದೆಯವರು ಖರೀದಿ ಮಾಡಿದ್ದರು ನನ್ನ ತಾಯಿಯ ಹೆಸರಿಗೆ ಖಾತೆ ಬದಲಾವಣೆ ಮಾಡಿದ್ದಾರೆ ಎಂದು ಹೇಳುತ್ತಾರೆ.

6) ದೇವಿಕೊಪ್ಪ ಗ್ರಾಮದ ಜಮೀನು ಐಟಂ ನಂ 2 ಸರ್ವೆ ನಂ 69/7 ವಿಸ್ತೀರ್ಣ 1 ಎಕರೆ 3 6 ಗುಂಟೆ ಜಮೀನವು ನಾಗರಾಜ ಮತ್ತು ಬಸವರಾಜಪ್ಪ ಅವರ ಹೆಸರಿಗೆ ಖರೀದಿ ಆಗಿರುತ್ತದೆ ಅಂದರೆ ಸರಿ. ಸದರಿ ಜಮೀನವು ನಾಗರಾಜಪ್ಪ ಮತ್ತು ಬಸವರಾಜಪ್ಪನ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಅಂದರೆ ಸರಿ. ನನ್ನ ತಂದೆಯವರು ನನ್ನ ತಮ್ಮಂದಿರಾದ ನಾಗರಾಜ ಮತ್ತು ಬಸವರಾಜಪ್ಪನಹೆಸರಿಗೆ ಖರೀದಿ ಮಾಡುವ ಮುಂಚೆ

ಕರಾರುಪತ್ರ ಮಾಡಿಕೊಂಡಿದ್ದರು ಅಂದರೆ ಸರಿ. ಸದರಿ ಕರಾರು ಪತ್ರವು 2001 ರಲ್ಲಿ ಆಗಿರುತ್ತದೆ. ಸದರಿ ಪತ್ರವು 2001ರಲ್ಲಿ ನೋಂದಣಿ ಆಗಿರುತ್ತದೆ. ಸದರಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಸದರಿ ಕರಾರು ಪತ್ರವನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ನನ್ನ ತಂದೆಯವರು ಐಟಂ 2 ನ್ನು ಹಣ ಕೊಟ್ಟು ನನ್ನ ತಮ್ಮಂದಿರಾದ ನಾಗರಾಜ ಮತ್ತು ಬಸವರಾಜಪ್ಪನ ಹೆಸರಿಗೆ ಖರೀದಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ತಂದೆಗೆ ಹಿರಿಯ ಮಗ ಅಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯು ಮನೆ ಜವಾಬ್ದಾರಿ ನೋಡಿಕೊಂಡಿರುತ್ತಾರೆ. ನನ್ನ ತಾಯಿಗೆ ಓದು ಮತ್ತು ಬರಹ ಬರುವುದಿಲ್ಲ. ನನ್ನ ತಂದೆ ಜೀವಂತ ಇದ್ದಾಗ ಅವರ ಜೊತೆ ನಾನು ವಾಸವಾಗಿದ್ದೆ ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಅಂದರೆ ಸಾಕ್ಷಿಯು ಆ ತರಹದ ದಾಖಲೆಗಳನ್ನು ಒಟ್ಟಿಗೆ ಇದ್ದೇವೆ ಎಂದು ತೋರಿಸಲು ದಾಖಲೆಗಳನ್ನು ಇಟ್ಟುಕೊಳ್ಳಲು ಆಗುವುದಿಲ್ಲ.

7) ದಾವಾ ಹಾಕಿದ ನಂತರ ಪ್ರತಿವಾದಿಯರ ಜೊತೆಗೆ ಒಟ್ಟಿಗೆ ವಾಸವಾಗಿ ಇದ್ದೇನೆ. ನಾನು ಈಗ ಪ್ರತ್ಯೇಕವಾಗಿ ವಾಸವಿದ್ದೇನೆ. ನನಗೆ ಗ್ರಾಮ ಪಂಚಾಯತಿಯವರು ಜಾಗವನ್ನು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನನ್ನದು ಪಡಿತರ ಚೀಟಿ ಇರುತ್ತದೆ. ನಮ್ಮ ತಂದೆಯವರು ಜೀವಂತ ಇದ್ದಾಗ ನಾವೆಲ್ಲರು ಒಟ್ಟಿಗೆ ಇದ್ದಾಗ ಪಡಿತರ ಚೀಟಿ ಇತ್ತು. ಸದರಿ ಪಡಿತರ ಚೀಟಿಯು ಪಡಿತರ ಅಂಗಡಿಯಲ್ಲಿ ಸಿಗುತ್ತದೆ ಅಂದರೆ ಸರಿ. ನನ್ನ ತಂದೆಯವರ ಜೊತೆಗೆ ಒಟ್ಟಿಗೆ ಇದ್ದೇವೆ ಎಂದು ತೋರಿಸಲು ಚುನಾವಣಾ ಪಟ್ಟಿಯಲ್ಲಿ ನಿಮ್ಮೆಲ್ಲರ ಹೆಸರು ಒಟ್ಟಿಗೆ ಇವೆಯಾ ಅಂದರೆ ಸಾಕ್ಷಿಯು ಆ ತರಹದ ದಾಖಲೆಗಳನ್ನು ಇಟ್ಟುಕೊಳ್ಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ತಾಲೂಕು ಕಚೇರಿಯಲ್ಲಿ 30 ರಿಂದ 40 ವರ್ಷಗಳ ಹಿಂದಿನಿಂದ ಚುನಾವಣೆ ಪಟ್ಟಿ ಇರುತ್ತದೆ ಅಂದರೆ ಗೊತ್ತಿಲ್ಲ.

8) ನಾನು ತೊರ್ಗಸಿ ಗ್ರಾಮಕ್ಕೆ ಬಂದು 30 ವರ್ಷಗಳ ಕಾಲ ಆಯಿತು. ನಾನು 30 ವರ್ಷಗಳಿಂದ ತೊರ್ಗಿಯಲ್ಲಿ ಇದ್ದೇನೆ ಎಂದು ತೋರಿಸಲು ದಾಖಲೆಗಳು ಇಲ್ಲ. ನಾನು ಈ ದಾವೆ ಹಾಕುವವರೆಗೂ ಕಣಸೋಗಿ ಗ್ರಾಮದಲ್ಲಿ ವಾಸವಾಗಿದ್ದೆ ಎಂದರೆ ಸರಿಯಲ್ಲ. ನಮ್ಮ ತಂದೆಯವರ ಜೊತೆಗೆ ನಾನು ಯಾವತ್ತೂ ವಾಸವಾಗಿಲ್ಲ ಅಂದರೆ ಸುಳ್ಳು.

9) ದಿನಾಂಕ 29-12-2011ರ ದಾನಪತ್ರವು ಸುಳ್ಳು ದಾನಪತ್ರ ಇರುತ್ತದೆ ಅದನ್ನು ವಜಾ ಮಾಡಬೇಕೆಂದು ನಾನು ಈ ದಾವೆಯಲ್ಲಿ ಯಾವುದೇ ಪರಿಹಾರ ಕೇಳಿಲ್ಲ ಅಂದರೆ ಸರಿಯಲ್ಲ. ಈ ದಾವೆಯಲ್ಲಿ ಸದರಿ ದಾನ ಪತ್ರ ಕಾನೂನು ಬದ್ಧ ಆಗಿಲ್ಲ ಅಂತಾ ಹೇಳಿ ವಜಾ ಮಾಡಲು ಪರಿಹಾರ ಕೇಳಿಲ್ಲ ಅಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರು ಐಟಂ ನಂ 2 ನ್ನು ಎಂ ಎಸ್ ಗುರುರಾಜರಾವ್ ತಂದೆ ಮುದ್ದುರಾವ್ ಅವರ ಕಡೆಯಿಂದ ತಮ್ಮ ಸ್ವಂತ ಹಣದಿಂದ ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ. 2001 ನೇ ಇಸವಿಯಲ್ಲಿ 2 ಮತ್ತು 3 ನೇ ಪ್ರತಿವಾದಿ ಹೆಸರಿಗೆ ಐಟಂ ನಂ 2 ಆಸ್ತಿಯು ಖಾತೆ ಬದಲಾವಣೆ ಆದದನ್ನು ನಾನು ಪ್ರಶ್ನೆ ಮಾಡಿಲ್ಲ, ಸಾಕ್ಷಿಯು ಮುಂದುವರೆದು ಒಟ್ಟು ಕುಟುಂಬದಲ್ಲಿದ್ದುದರಿಂದ ಪ್ರಶ್ನೆ ಮಾಡಿಲ್ಲ ಎಂದು ಹೇಳುತ್ತಾರೆ. ನಾನು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಹಾಗಾಗಿ ಪ್ರಶ್ನೆ ಮಾಡಿಲ್ಲ ಅಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರು ಐಟಂ ನಂ 2 ನ್ನು ಸಮ ಹಿಸ್ಸೆಯಂತೆ ನೊಂದಾಯಿತ ವಿಭಾಗ ಪತ್ರದ ಮೂಲಕ ಹಿಸ್ಸೆ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲದೇ ಮಾಡಿಕೊಂಡಿದ್ದಾರೆ ಎಂದು ಹ ಹೇಳುತ್ತಾರೆ. ಸದರಿ 2 ಮತ್ತು 3 ನೇ ಪ್ರತಿವಾದಿಯರ ಹೆಸರಿಗೆ ವಿಭಾಗದಂತೆ ಖಾತೆ ಬದಲಾವಣೆ ಆಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದೇ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಸದರಿ ನೊಂದಾಯಿತ ವಿಭಾಗ ಪತ್ರವನ್ನು ಸೃಷ್ಟಿ ಮಾಡಿ<sup></sup>ೊಂಡಿದ್ದಾರೆ ಎಂದು ರದ್ದುಪಡಿಸಲು ಪರಿಹಾರ ಕೇಳಿಲ್ಲ ಅಂದರೆ ಸರಿ. ನಾನು ನ್ಯಾಯಾಲಯಕ್ಕೆ ದಾವೆ ಹಾಕಿದ್ದೇನೆ ಎಂದು ಹೇಳುತ್ತಾರೆ. ನಾಗರಾಜನ ಹೆಂಡತಿ ರೇಣುಕಮ್ಮಳ ಹೆಸರಿಗೆ

ಹಾಗೂ ಬಸವರಾಜನ ಹೆಂಡತಿ ಲಕ್ಷ್ಮಿ ಅವರ ಹೆಸರಿಗೆ ಅವರವರ ಹಿಸ್ಸೆಗೆ ಬಂದ ಆಸ್ತಿಯನ್ನು ನೊಂದಾಯಿತ ದಾನ ಪತ್ರದ ಮುಖಾಂತರ ಖಾತೆ ಬದಲಾವಣೆ ಮಾಡಿದ್ದಾರೆ ಅಂದರೆ ಸಾಕ್ಷಿಯು ಖಾತೆ ಬದಲಾವಣೆ ಮಾಡಿಕೊಂಡಿದ್ದರಿಂದ ಸದರಿ ರೇಣುಕಮ್ಮ ಮತ್ತು ಲಕ್ಷ್ಮಿಯವರನ್ನ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ದಾನ ಪತ್ರಗಳನ್ನು ರದ್ದು ಮಾಡಲು ಪರಿಹಾರ ಕೇಳಿಲ್ಲ ಅಂದರೆ ಸರಿಯಲ್ಲ. ಬಸವಣ್ಣಪ್ಪನ ಮಗ ಶ್ರೀಧರ ಅವರು ದಾವೆ ಹಾಕಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಅದು ಒ ಎಸ್ ನಂ 180/2022 ನ್ನು ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ದಾವೆಯಿಂದ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲು ಮಾಡಲು ವಕೀಲರು ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.**

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.